ಇ) *ಸರ್ಕಾರ1995-96ನೇ ಸಾಲಿನಲ್ಲಿ ಪುರಸಭೆ ನಗರಸಭೆ ಹಾಗೂ ಮಹಾನಗರಪಾಲಿಕೆಗಳಿಗೆ ನೀಡಿದ ಅನುದಾನ ಎಷ್ಟು?*

ಈ) *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪುರಸಭೆಗಳಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?*

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :

ಅ) ಮಹಾನಗರ ಪಾಲಿಕೆಗಳು - 6

ಪುರಸಭೆಗಳು - 39

ನಗರ ಸಭೆಗಳು - 81

ಟೌನ್ ಪಂಚಾಯತಗಳು - 88

ಆ) ಯಾವುದೆ ಗ್ರಾಮ ಪಂಚಾಯತಿಗಳನ್ನು ಮುನ್ಸಿಪಾಲಿಟಿಗಳಾಗಿ ಪರಿವರ್ತಿಸಿಲ್ಲ ಆದರೆ ತಾಲ್ಲೂಕು ಮಟ್ಟದಲ್ಲಿ 48 ಮಧ್ಯಂತರ ಪಂಚಾಯ್ತಿಗಳನ್ನು ಹಾಗೂ ಎರಡು ಮಧ್ಯಂತರ ಮಂಡಲ ಪಂಚಾಯಿತಿಗಳು ಶಿರಾಳ ಕೊಪ್ಪ ಹಾಗೂ ಕೆಂಗೇರಿ ನಗರ ಪಂಚಾಯ್ತಿಗಳಾಗಿ ಪರಿವರ್ತಿಸಲಾಗಿದೆ

ಇ) 1995-96ನೇ ಸಾಲಿನಲ್ಲಿ ಬಿಡುಗಡೆ ಮಾಡಿದ ಅನುದಾನಗಳ ವಿವರ

1)	ಜಕಾತಿ ಅನುದಾನ	-	ರೂ.	109.94	ಕೋಟಿ
2)	ವಾಹನ ತೆರಿಗೆ ಅನುದಾನ	-	ರೂ.	8.06	ಕೋಟಿ
3)	ಅಭಿವೃದ್ಧಿ ಅನುದಾನ	-	ರೂ.	28.00	ಕೋಟಿ
ಈ)	ಜಕಾತಿ ಅನುದಾನ	-	ರೂ.	5,58,752	
	ವಾಹನ ತೆರಿಗೆ ಅನುದಾನ	-	ರೂ.	4.90	ಲಕ್ಷ
	ಅಭಿವೃದ್ಧಿ ಅನುದಾನ	-	ರೂ.	1.05	ಕೋಟಿ

ಸಿಲ್ಕ್ ಫಿಲೇಚರ್ಸ್ ಮತ್ತು ಟೂಲ್ಸ್ ಕಾರ್ಮಿಕರ ಒಪ್ಪಂದದ ಬಗ್ಗೆ

490 - **ಶ್ರೀ ಟಿ. ಜಯಚಂದ್ರ** (ಕಳ್ಳಂಬೆಳ್ಳ) : ಮಾನ್ಯ ರೇಷ್ಮೆ ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸರ್ಕಾರದ ವ್ಯಾಪ್ತಿಯಲ್ಲಿ ಬರುವ ಸಿಲ್ಕ್ ಫಿಲೇಚರ್ಸ್ ಕಾರ್ಮಿಕರ ಟೂಲ್ಸ್ ಒಪ್ಪಂದ ಕೊನೆಗೊಂಡಿರುವುದು ಯಾವಾಗ?*

ಆ) *ಇದೇ ಮಾದರಿಯಲ್ಲಿರುವ ಕೆಎಸ್‌ಐಸಿ ನೌಕರರಿಗೆ ಈ ಸವಲತ್ತನ್ನು ಈಗಾಗಲೇ ಒದಗಿಸಿದ್ದು ಸರ್ಕಾರಿ ವ್ಯಾಪ್ತಿಯಲ್ಲಿರುವ ಕಾರ್ಖಾನೆಗಳಿಗೆ ಇನ್ನೂ ಅನ್ವಯಿಸಲು ವಿಳಂಬವಾಗಲು ಕಾರಣವೇನು?*

ಶ್ರೀ ಡಿ. ನಾಗರಾಜಯ್ಯ (ರೇಷ್ಮೆ ರಾಜ್ಯ ಸಚಿವರು) :

ಅ) ದಿನಾಂಕ 31-3-1993.

ಆ) ಪ್ರಸ್ತಾವನೆಯು ಇಲಾಖೆಯಿಂದ ಈಗಾಗಲೇ ಸರ್ಕಾರಕ್ಕೆ ಬಂದಿದ್ದು, ಅದನ್ನು ಸಮಾಲೋಚಿಸಲು ಬೇರೆ ಇಲಾಖೆಗೆ ಕಳುಹಿಸಿರುತ್ತೆ. ಅದು ಅಲ್ಲಿಂದ ಬಂದ ತಕ್ಷಣವೇ ಸೂಕ್ತ ಆದೇಶ ಹೊರಡಿಸಲಾಗುವುದು.

ಬೈಂದೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹಾರ

493 - ಶ್ರೀ ಐ.ಎಂ. ಜಯರಾಮಶೆಟ್ಟಿ (ಬೈಂದೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೈಂದೂರು ನಗರ ನೀರು ಸರಬರಾಜು ಯೋಜನೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಪುರಸಭೆಗೆ ಹಸ್ತಾಂತರಗೊಳಿಸ ಬೇಕೆಂಬ ತೀರ್ಮಾನ ಕೈಗೊಳ್ಳಲಾಗಿದೆಯೇ? ಈ ತೀರ್ಮಾನ ಎಂದು ಕೈಗೊಳ್ಳಲಾಯಿತು, ಈ ತೀರ್ಮಾನ ಕೈಗೊಳ್ಳಲು ಕಾರಣಗಳೇನು?

ಆ) ಈ ತೀರ್ಮಾನ ಅನ್ವಯ ಹಸ್ತಾಂತರಗೊಳಿಸಲಾಯಿತೆ. ಹಸ್ತಾಂತರವನ್ನು ಪುರಸಭೆಯು ಪೂರ್ಣ ಪ್ರಮಾಣದಲ್ಲಿ ಒಪ್ಪಿಕೊಂಡಿದೆಯೇ? ಇಲ್ಲದಿದ್ದಲ್ಲಿ ಕಾರಣಗಳೇನು ಈ ಕಾರಣಗಳು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಯಾವಾಗ ಸರಿಪಡಿಸಿ ಬೈಂದೂರಿನ ಜನತೆಗೆ ಕುಡಿಯುವ ನೀರು ಸರಬರಾಜು ವ್ಯವಸ್ಥೆ ಮಾಡುವುದು.

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಬೈಂದೂರು ನೀರು ಸರಬರಾಜು ಯೋಜನೆಯನ್ನು ಈಗಾಗಲೇ ಹಸ್ತಾಂತರಿಸಲಾಗಿದೆ, ಮಂಡಳಿಯ ಸಂಹಿತೆಯ ಪ್ರಕಾರ ಜಲಮಂಡಳಿಯು ನೀರು ಸರಬರಾಜು ಯೋಜನೆಯನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಿದ ನಂತರ, ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಬೇಕಾಗುತ್ತದೆ.

ಆ) ದಿನಾಂಕ : 17.10.1995 ರಂದು ಯೋಜನೆಯನ್ನು ಬೈಂದೂರು ಪುರಸಭೆಗೆ ಹಸ್ತಾಂತರಿಸಲಾಗಿದೆ. ಹಸ್ತಾಂತರವನ್ನು ಪುರಸಭೆಯು ಒಪ್ಪಿಕೊಂಡಿದ್ದು ಹಸ್ತಾಂತರಗೊಳಿಸುವ ಸಮಯದಲ್ಲಿ ಯೋಜನೆಯು ಸಣ್ಣಪುಟ್ಟ ಕೆಲಸಗಳನ್ನು ಸರಿಪಡಿಸಿಕೊಡಬೇಕೆಂದು ಕೋರಿಕೆ ಸಲ್ಲಿಸಿರುತ್ತಾರೆ. ಮತ್ತು ಸಧ್ಯದಲ್ಲಿ ಕೆಲಸಗಳನ್ನು ಮುಗಿಸಲು ಪ್ರಸ್ತಾಪಿಸಲಾಗಿದೆ. ಪುರಸಭೆಯವರೇ ಈಗ ನೀರು ಸರಬರಾಜು ಪುರಸಭೆಯವರೇ ಈಗ ನೀರು ಸರಬರಾಜು ವ್ಯವಸ್ಥೆಯ ನಿರ್ವಹಣೆಯ ಮಾಡುತ್ತಿರುತ್ತಾರೆ.

ಕಾಟಿಪಳ್ಳದಲ್ಲಿ ಅಂಬೇಡ್ಕರ್ - ಆಶ್ರಯ ಯೋಜನೆಗಳ ಮನೆಗಳು

494 - ಶ್ರೀ ಕುಂಬೈ ಸುಂದರರಾವ್ (ಸುರತ್ಕಲ್) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ತಾಲ್ಲೂಕು ಕಾಟಿಪಾಳ್ಳದಲ್ಲಿ ಪರಿಶಿಷ್ಟ ವರ್ಗದವರಿಗೆ ನಿರ್ಮಾಣವಾಗಿರುವ ಅಂಬೇಡ್ಕರ್ ಆಶ್ರಯ ಮನೆಗಳು ಎಷ್ಟು?